**ದಿನಾಂಕಃ 28-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

7. ಆ ದಿನ ನಮ್ಮಗಳ ಮುಂದೆ 2 ನೇ ಆರೋಪಿತನು, "1 ನೇ ಆರೋಪಿ ನನಗೆ ದಾಂಡೇಲಿಯ ಕೋಗಿಲ ಭವನದಲ್ಲಿ ಭೇಟಿಯಾಗಿ, ವ್ಯವಹಾರದಲ್ಲಿ ಪ್ರೇಮಕುಮಾರನಿಂದ ನನಗೆ ತೊಂದರೆಯಾಗುತ್ತಿದೆ, ಹೇಗಾದರೂ ಮಾಡಿ ಪ್ರೇಮಕುಮಾರನನ್ನು ಕೊಲೆ ಮಾಡಬೇಕೆಂದು ಹೇಳಿದ್ದು, ಅದರಂತೆ ನಾವು ಪ್ರೇಮಕುಮಾರನ ಕೊಲೆಗೆ ಸಂಚು

ರೂಪಿಸಿದ್ದೇವು, ಆ ನಂತರ ನಾನು ಮತ್ತು 3 ನೇ ಆರೋಪಿ ನಮ್ಮ ಬಳಿ ಇದ್ದ ಕಬ್ಬಿಣದ ಪಟ್ಟಿಯನ್ನು ತೆಗೆದುಕೊಂಡು ಕುಂಬಾರವಾಡದಿಂದ ಉಳವಿಗೆ ಹೋಗುವ ರಸ್ತೆಯ ಮಧ್ಯದಲ್ಲಿ ಇದ್ದ ಸುರೇಶ ಆಚಾರ ಎನ್ನುವರ ಬಳಿ ನಾವು ತೆಗೆದುಕೊಂಡು ಹೋಗಿದ್ದ ಕಬ್ಬಿಣದ ಪಟ್ಟಿಯನ್ನು ಕೊಟ್ಟು, ಅದರಿಂದ ಕತ್ತಿಯನ್ನು ಮಾಡಿಕೊಡುವಂತೆ ಹೇಳಿದ್ದೇವು. ಆದರೆ ಪುನಃ ಹೋದಾಗ ಆತ ಕತ್ತಿಯನ್ನು ಮಾಡಿರಲಿಲ್ಲ, ಆದ್ದರಿಂದ ಅವನ ಬಳಿ ಇದ್ದ ಕತ್ತಿಗಳಲ್ಲಿ, ಒಂದು ಕತ್ತಿಯನ್ನು ಖರೀದಿ ಮಾಡಿದೇವು, ಕತ್ತಿ ಖರೀದಿ ಮಾಡಿದ ನಂತರ ನಾನು ಪ್ರೇಮಕುಮಾರನ ಹತ್ತಿರ ನಾವು ಕಟ್ಟಿಗೆಯ ವ್ಯಾಪಾರ ಮಾಡುವಾ ಅಂತಾ ಹೇಳಿ, ಈ ವಿಚಾರವನ್ನು ನಾನು 1 ನೇ ಆರೋಪಿಗೆ ತಿಳಿಸಿದಾಗ, 1 ನೇ ಆರೋಪಿಯು ಇದೇ ಸರಿಯಾದ ಸಮಯ, ಹೇಗಾದರೂ ಮಾಡಿ ಪ್ರೇಮಕುಮಾರನನ್ನು ಮುಗಿಸಿ ಬಿಡಿ ಎಂದು ಹೇಳಿ, ಕೊಲೆ ಮಾಡುವ ಸಲುವಾಗಿ 1 ನೇ ಆರೋಪಿ ಮಾರುತಿ ಜೆನ್ ಕಾರನ್ನು ಖರೀದಿ ಮಾಡಿದ್ದನು, ಆ ನಂತರ ಕೊಲೆ ಮಾಡುವ ಮೊದಲೇ ಅಂದರೆ ದಿಃ 15-10-2018 ರಂದು ನಾನು ಮತ್ತು 3 ನೇ ಆರೋಪಿ, 1 ನೇ ಆರೋಪಿ ಖರೀದಿಸಿದ್ದ ಜೆನ್ ಕಾರನ್ನು ತೆಗೆದುಕೊಂಡು, ಕೊಲೆ ಮಾಡಲು ಉದ್ದೇಶಿಸಿದ್ದ ಸ್ಥಳಕ್ಕೆ ಹೋಗಿ ಪರಿಶೀಲಿಸಿಕೊಂಡು ಬಂದಿದ್ದೇವು, ಅದೇ ದಿನ ಸಂಜೆ ನಾನು ಪ್ರೇಮಕುಮಾರನಿಗೆ ಕರೆ ಮಾಡಿ ಕಟ್ಟಿಗೆ ವ್ಯಾಪಾರ ಮಾಡಲು, ಕಟ್ಟಿಗೆ ಇರುವ ಸ್ಥಳವನ್ನು ತೋರಿಸುತ್ತೇನೆ, ನಾಳೆ ಹೋಗುವಾ ಎಂದು ಹೇಳಿದೆನು, ಅದಂರತೆ ದಿಃ 16-10-2018 ರಂದು ನಾನು ಪ್ರೇಮಕುಮಾರನಿಗೆ ಕಾರವಾರದ ಸಿವಿಲ್ ಆಸ್ಪತ್ರೆಯ ಹತ್ತಿರ ಬರುವಂತೆ ತಿಳಿಸಿದೆ, ಆದರೆ ಪ್ರೇಮಕುಮಾರ ಊಟ ಮಾಡಿ ಮದ್ಯಾಹ್ನ ಬರುವುದಾಗಿ ಹೇಳಿದ್ದು, ಪ್ರೇಮಕುಮಾರ ಊಟ ಮಾಡಿ ಬರುವವರೆಗೆ ನಾನು ಕಾರವಾರದ ಗಾಂಧೀ ಮಾರ್ಕೇಟ್ ನಲ್ಲಿ ಮತ್ತೊಂದು ಕತ್ತಿಯನ್ನು ಖರೀದಿ ಮಾಡಿದೆ, ಆ ನಂತರ ಮದ್ಯಾಹ್ನ ಮತ್ತೊಮ್ಮೆ ನಾನು ಪ್ರೇಮಕುಮಾರನಿಗೆ ಕರೆ ಮಾಡಿ ತಾನು ಕಾರವಾರದ ಸಿವಿಲ್ ಆಸ್ಪತ್ರೆ ಹತ್ತಿರ ಕಾಯುತ್ತಿದ್ದು, ಬೇಗ ಬಾ ಎಂದು ಹೇಳಿದೆ, ಆಗ ಪ್ರೇಮಕುಮಾರ ತನ್ನ ದ್ವಿಚಕ್ರ ವಾಹನದಲ್ಲಿ ಸಿವಿಲ್ ಆಸ್ಪತ್ರೆ ಹತ್ತಿರ ಬಂದಿದ್ದು, ಆಗ ಪ್ರೇಮಕುಮಾರನ ದ್ವಿಚಕ್ರ ವಾಹನವನ್ನು ಆಸ್ಪತ್ರೆಯ ಪಾರ್ಕಿಂಗ್ ಸ್ಥಳದಲ್ಲಿ ಬಿಟ್ಟು, ನಾವು ತಂದಿದ್ದ ಮಾರುತಿ ಜೆನ್ ಕಾರಿನಲ್ಲಿ ನಾನು ಪ್ರೇಮಕುಮಾರನನ್ನು ಕದ್ರಾಗೆ ಕರೆದುಕೊಂಡು ಹೋಗುವುದಾಗಿ ಹೇಳಿ, ಕದ್ರಾಗೆ ಹೋಗದೆ, ಉಳವಿ ಕಡೆಗೆ ಕರೆದುಕೊಂಡು ಹೋದೆ ಹಾಗೂ ದಾರಿಯಲ್ಲಿ ಹೋಗುವಾಗ 3 ನೇ ಆರೋಪಿಗೆ ಮಾಹಿತಿಯನ್ನು ನೀಡುತ್ತಾ ಹೋದೆ, ಉಳವಿ ಮುಟ್ಟಿದಾಗ 3 ನೇ ಆರೋಪಿ ಸಿಕ್ಕಿದ್ದು, ನಾವು ಕಾರನ್ನು ಅಲ್ಲಿಯೇ ಬಿಟ್ಟು, 3 ನೇ ಆರೋಪಿ

ತಂದಿದ್ದ ಬೈಕ್ ಮೇಲೆ ನಾವು ಮೂರು ಜನ ಆಕಳಗವಿ ಅರಣ್ಯ ಪ್ರದೇಶದ ಶವ ಬಿದ್ದ ಸ್ಥಳದಿಂದ 240 ಅಡಿ ದೂರದಲ್ಲಿ ಬೈಕ್ ನಿಲ್ಲಿಸಿ, ಅಲ್ಲಿಂದ ನಡೆದುಕೊಂಡು ಮುಂದೆ ಹೋಗಿ, ಶವ ಬಿದ್ದ ಸ್ಥಳದಿಂದ 210 ಅಡಿ ದೂರದಲ್ಲಿ ನಾವು ಪ್ರೇಮಕುಮಾರನಿಗೆ 'ನಾವು ಯಾರೊಂದಿಗೆ ಕಟ್ಟಿಗೆ ವ್ಯವಹಾರ ಮಾಡುತ್ತಿದ್ದೇವೆ ಅವರನ್ನು ನಾವು ನೋಡಬಾರದು, ಅದಕ್ಕೆ ನಾವು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಹೋಗಬೇಕು' ಎಂದು ಹೇಳಿ, ಪ್ರೇಮಕುಮಾರನ ಹಾಗೂ ನಾನು ಕಣ್ಣಿಗೆ ಬಟ್ಟೆ ಕಟ್ಟಿಕೊಂಡೆವು, ಆ ನಂತರ ನಾವು ಪ್ರೇಮಕುಮಾರನ ಕೊಲೆ ಮಾಡಿ, ಆ ನಂತರ ಪ್ರೇಮಕುಮಾರನ ಬಟ್ಟೆ, ಪರ್ಸ್, ಒಂದು ಬಂಗಾರದ ಚೈನ್, ಮೊಬೈಲ್ ಮತ್ತು ಶೂ ಹಾಗೂ ನಾನು ಧರಿಸಿದ್ದ ಬಟ್ಟೆ, ಕೊಲೆ ಮಾಡಲು ಬಳಸಿದ ಎರಡು ಕತ್ತಿಗಳು, ಕಣ್ಣಿಗೆ ಕಟ್ಟಿದ್ದ ಎರಡು ಕಪ್ಪು ಬಟ್ಟೆಗಳನ್ನು ಬ್ಯಾಗಿನಲ್ಲಿ ಹಾಕಿಕೊಂಡೆವು, ಆನಂತರ ನಾನು ಮತ್ತು 3 ನೇ ಆರೋಪಿ ಬೈಕ್ ಮೇಲಾಗಿ ಕಾರು ನಿಲ್ಲಿಸಿದ ಸ್ಥಳಕ್ಕೆ ಬಂದೆವು, ಅಲ್ಲಿ ಪ್ರೇಮಕುಮಾರನ ಬಂಗಾದರ ಚೈನನ್ನು 3 ನೇ ಆರೋಪಿಗೆ ಕೊಟ್ಟೆನು, ಆ ನಂತರ ನಾನು ಕಾರಿನಲ್ಲಿ  ಗಣೇಶ ಗುಡಿಯ ಹತ್ತಿರ ಹೋಗಿ, ಪ್ರೇಮಕುಮಾರನ ಮೊಬೈಲ್ ನ್ನು ನಾನು ತೆಗೆದುಕೊಂಡೆನು, ಆ ನಂತರ ಪ್ರೇಮಕುಮಾರನ ಬಟ್ಟೆ, ಪರ್ಸ್, ಶೂ ಹಾಗೂ ನನ್ನ ಬಟ್ಟೆಗಳನ್ನು ಮತ್ತು ಕೃತ್ಯಕ್ಕೆ ಬಳಸಿದ ಕಪ್ಪು ಬಟ್ಟೆಗಳನ್ನು ಹಾಗೂ ಕತ್ತಿಗಳನ್ನು ಗಣೇಶ ಗುಡಿಯ ಹತ್ತಿರದ ಸೇತುವೆ ಕೆಳಗೆ ನೀರಿನಲ್ಲಿ ಬಿಸಾಡಿದೆನು" ಎಂದು 2 ನೇ ಆರೋಪಿತನು ಹೇಳಿದನು.

8. 2 ಮತ್ತು 3 ನೇ ಆರೋಪಿಗಳು ಶವ ಬಿದ್ದ ಸ್ಥಳದಿಂದ 210 ಅಡಿ ದೂರದಲ್ಲಿ, ತಾವು ಪ್ರೇಮಕುಮಾರನ ಕಣ್ಣಿಗೆ ಬಟ್ಟೆ ಕಟ್ಟಿ  ಹಾಗೂ 2 ನೇ ಆರೋಪಿ ತನಗೆ ಬಟ್ಟೆ ಕಟ್ಟಿಕೊಂಡ ಸ್ಥಳ ಹಾಗೂ ಸ್ವಲ್ಪ ದೂರ ಮುಂದೆ ಹೋಗಿ, ಶವ ಬಿದ್ದ ಸ್ಥಳದಿಂದ 150 ಅಡಿ ದೂರದಲ್ಲಿ 2 ನೇ ಆರೋಪಿ ತನ್ನ ಕಣ್ಣಿಗೆ ಕಟ್ಟಿಕೊಂಡ ಬಟ್ಟೆಯನ್ನು ಬಿಚ್ಚಿ , 2 ಮತ್ತು 3 ನೇ ಆರೋಪಿತರು ಪ್ರೇಮಕುಮಾರನ ಕೊಲೆ ಮಾಡಿದ ಸ್ಥಳವನ್ನು ತೋರಿಸಿದ್ದು, ಅಲ್ಲಿ ಪೋಲಿಸರು ಪಂಚರು ಹಾಗೂ ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿ, ಪೋಟೋ ತೆಗೆದರು. ಆ ನಂತರ 2 ಮತ್ತು 3 ನೇ ಆರೋಪಿತರು ಶವ ಬಿದ್ದ ಸ್ಥಳದಿಂದ 240 ಅಡಿ ದೂರದಲ್ಲಿ ತಾವು ಬೈಕ್ ನಿಲ್ಲಿಸಿದ್ದ ಸ್ಥಳವನ್ನು ತೋರಿಸಿದ್ದು, ಅಲ್ಲಿ ಪೋಲಿಸರು ಸ್ಥಳ ಪರಿಶೀಲಿಸಿ, ಪಂಚನಾಮೆ ಮಾಡಿ ಪೋಟೋವನ್ನು ತೆಗೆದರು. ಆ ನಂತರ 2 ಮತ್ತು 3 ನೇ ಆರೋಪಿತರು ಉಳವಿಯ ಆಕಳುಗವಿ ಚೆಕ್ ಪೋಸ್ಟ್ ನಿಂದ 170 ಮೀಟರ ದೂರದಲ್ಲಿ ತಾವು ಕಾರನ್ನು ನಿಲ್ಲಿಸಿದ್ದ ಜಾಗವನ್ನು ತೋರಿಸಿದ್ದು, ಅಲ್ಲಿ ಪೋಲಿಸರು ಪಂಚರು ಹಾಗೂ ನನ್ನ ಸಮಕ್ಷಮ ಪಂಚನಾಮೆಯನ್ನು

ಮಾಡಿ, ಫೋಟೋ ತೆಗೆದರು. ಶವ ಪಂಚನಾಮೆಯ ಕಾಲಕ್ಕೆ ವೈದ್ಯರು ಸ್ಥಳಕ್ಕೆ ಬಂದಿದ್ದು, ಶವ ಪಂಚನಾಮೆಯ ನಂತರ ವೈದ್ಯರು ಶವ ಪರೀಕ್ಷೆಯನ್ನು ಮಾಡಿ, ಮೃತ ದೇಹವನ್ನು ನಮಗೆ ಹಸ್ತಾಂತರಿಸಿದರು. ಆ ನಂತರ ನಾವು ಮೃತ ಪ್ರೇಮಕುಮಾರನ ಶವವನ್ನು ತಂದು ಅಂತ್ಯ ಸಂಸ್ಕಾರ ಮಾಡಿರುತ್ತೇವೆ. ಪ್ರೇಮಕುಮಾರನ ಕೊಲೆ ಮಾಡಲು ಸಂಚು ರೂಪಿಸಿ, ಕೊಲೆ ಮಾಡಿದ ವಿಷಯ 4 ಮತ್ತು 5 ನೇ ಆರೋಪಿಗಳಿಗೆ 1 ನೇ ಆರೋಪಿ ತಿಳಿಸಿದ್ದು, ಈ ವಿಷಯ ನನಗೆ ಪೋಲಿಸರಿಂದ ತಿಳಿದುಬಂತು. ತನಿಖೆಯ ಕಾಲಕ್ಕೆ 1 ನೇ ಆರೋಪಿಯನ್ನು ಕಾರವಾರದಿಂದ ಗೋವಾಕ್ಕೆ 4 ನೇ ಆರೋಪಿಯು ತನ್ನ ವಾಹನದಲ್ಲಿ ಕರೆದುಕೊಂಡು ಹೋಗಿರುತ್ತಾನೆ. ಈ ಬಗ್ಗೆ ನಾನು ಪೋಲಿಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ.

9. ಆ ನಂತರ ದಿಃ 16-11-2018 ರಂದು ನ್ಯಾಯಾಲಯದಲ್ಲಿ ಡಿ.ಎನ್.ಎ ಪರೀಕ್ಷೆಗಾಗಿ ನನ್ನ ತಾಯಿಯ ರಕ್ತ ಮಾದರಿಯನ್ನು ಸಂಗ್ರಹಿಸಿರುತ್ತಾರೆ. ಸಾಕ್ಷಿಯು ಮೃತ ಪ್ರೇಮಕುಮಾರ ಕೊಲೆಯಾಗುವ ಕಾಲಕ್ಕೆ ಧರಿಸಿದ್ದ ನಿಕ್ಕರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-10 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಮೃತ ಪ್ರೇಮಕುಮಾರನ ಬಂಗಾರದ ಚೈನ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-4 ಎಂದು ಗುರುತಿಸಲಾಗಿರುತ್ತದೆ. ಶವದ ಪಕ್ಕದಲ್ಲಿ ಬಿದ್ದಿದ್ದ ಒಂದು ಹಸಿರು ಬಣ್ಣದ ಹಾಗೂ ಒಂದು ಬಿಳಿ ಬಣ್ಣದ ಬಟ್ಟೆಯ ತುಂಡುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೆ ಮಾಲು-8 ಮತ್ತು 9 ಎಂದು ಗುರುತಿಸಲಾಗಿರುತ್ತದೆ. ಆರೋಪಿತರು ಶವ ತೋರಿಸಿದ ಫೋಟೊಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ-13 ಮತ್ತು 14 ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿ ಶವ ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೊಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ-16 ಮತ್ತು 17 ಎಂದು ಗುರುತಿಸಲಾಗಿರುತ್ತದೆ. ಕಣ್ಣಿಗೆ ಬಟ್ಟೆ ಕಟ್ಟಿದ ಸ್ಥಳ ಹಾಗೂ ಕತ್ತಿಯಿಂದ ಹೊಡೆದ ಸ್ಥಳದ ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೊಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ-19 ಮತ್ತು 20 ಎಂದು ಗುರುತಿಸಲಾಗಿರುತ್ತದೆ. 3 ನೇ ಆರೋಪಿತ ತನ್ನ ಬೈಕ್ ನಿಲ್ಲಿಸಿದ ಸ್ಥಳದ ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೊಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ-22 ಮತ್ತು 23 ಎಂದು ಗುರುತಿಸಲಾಗಿರುತ್ತದೆ. 2 ನೇ ಆರೋಪಿತನು ಕಾರು ನಿಲ್ಲಿಸಿದ ಸ್ಥಳದ ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೊಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ-25 ಮತ್ತು 26 ಎಂದು

ಗುರುತಿಸಲಾಗಿರುತ್ತದೆ. ನಿ.ಪಿ–3 ಪೋಟೋದಲ್ಲಿ ಪ್ರೇಮಕುಮಾರನ ದ್ವಿಚಕ್ರ ವಾಹನವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ತಾನು ಈ ಹಿಂದೆ ನೀಡಿದ ಸಾಕ್ಷ್ಯದಲ್ಲಿ ಕಾರವಾರ ಪೋಲಿಸರು ನಮ್ಮ ಜೊತೆ ಖಾನಾಪುರಕ್ಕೆ ಬಂದಿದ್ದ ಪೋಲಿಸರಿಗೆ ಚಾಸಾ–32 ರವರನ್ನು ಮಾತ್ರ ಕರೆದುಕೊಂಡು ಬರುವಂತೆ ಹೇಳಿದ್ದು, 2 ನೇ ಆರೋಪಿ ತಂದು ನಿಲ್ಲಿಸಿದ ಮಾರುತಿ ಜೆನ್ ಕಾರನ್ನು ತರುವಂತೆ ಹೇಳಿರಲಿಲ್ಲ ಹಾಗೂ ಅದೇ ಕಾರಿನಲ್ಲಿ 2 ನೇ ಆರೋಪಿಯ ಅಕ್ಕ ಮತ್ತು ತಮ್ಮನನ್ನು ಕರೆದುಕೊಂಡು ಬರುವಂತೆ ಸಹ ಹೇಳಿರಲಿಲ್ಲ, ಅವರು ಬೇರೆ ಕಾರಿನಲ್ಲಿ ಬಂದಿದ್ದರು ಎಂದು ನುಡಿಯುತ್ತಾರೆ. 3 ಆರೋಪಿಯನ್ನು ಕಾರವಾರ ಪೋಲಿಸ್ ಠಾಣೆಯಲ್ಲಿ ಹಾಗೂ ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆ ಮಾಡುವ ಕಾಲಕ್ಕೆ ನೋಡಿರುತ್ತೇನೆ. 4 ಮತ್ತು 5 ನೇ ಆರೋಪಿಗಳು ಪ್ರೇಮಕುಮಾನ ಪರಿಚಯದವರು ಹಾಗೂ ಅವರನ್ನು ಪೋಲಿಸ್ ಠಾಣೆಯಲ್ಲಿ ನೋಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/–

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ